# ನ.23: ಸುರತ್ಕಲ್ ಎನ್‌ಐಟಿಕೆ ಘಟಿಕೋತ್ಸವ

ಮಂಗಳೂರು, ನ.21: ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ(ಎನ್‌ಐಟಿಕೆ) 22ನೇ ವಾರ್ಷಿಕ ಘಟಿಕೋತ್ಸವ ನ.23ರಂದು ಸುರತ್ಕಲ್‌ನ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ನಿರ್ದೇಶಕ ಪ್ರೊ| ಬಿ. ರವಿ ತಿಳಿಸಿದ್ದಾರೆ.

ಸ್ನಾತಕೋತ್ತರ ಘಟಿಕೋತ್ಸವದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ| ಗೋವಿಂದನ್ ರಂಗರಾಜನ್ ಮುಖ್ಯ ಅತಿಥಿಯಾಗಿರುವರು. ಸಿಕಂದರಾಬಾದ್‌ನ ಕಿಮ್ಸ್ ಫೌಂಡೇಷನ್ ಮತ್ತು ರಿಸರ್ಚ್ ಸೆಂಟರ್ ಅಧ್ಯಕ್ಷ ಹಾಗೂ ಡಿಆರ್‌ಡಿಒದ ನೌಕಾ ವ್ಯವಸ್ಥೆ ಮತ್ತು ಸಾಮಗ್ರಿಗಳ ಮಾಜಿ ಮಹಾನಿರ್ದೇಶಕ ಡಾ| ಭುಜಂಗ ರಾವ್ ವೆಪಕೊಮ್ಮ ಗೌರವ ಅತಿಥಿಗಳಾಗಿರುವರು ಎಂದು ತಿಳಿಸಿದ್ದಾರೆ.

Udayavani, Date:22/11/24, p, no - 10